GOVERNMENT OF KARNATAKA
(Police Department)

NO:03/PRO/COP/2026

Office of the
Commissioner of Police,
Bengaluru City.
Dated:21/01/2026.

# PRESS NOTE

## Rajarajeshwarinagar Police Operation.

## Husband and His Friend Arrested for Murder on Suspicion of Wife's Illicit Relationship.

On 10th January 2026, the complainant Sri Arun Kumar appeared before the police station and lodged a complaint. In his complaint, he stated that his younger sister Smt. Asha S., wife of Virupaksha had married Virupaksha, a resident of Santemavathuru village, Kunigal Taluk, Tumakuru District, about six years ago, after being in love. Since their marriage, the couple had been residing in Bengaluru, and for the past one and a half years, they had been living in Rajarajeshwarinagar. From the beginning of the marriage, Virupaksha did not take proper care of Asha, did not go to work regularly, and was using the money earned by her for himself.

Later, disputes arose between the couple regarding Virupaksha's alleged illicit relationship, due to which they had been living separately for about one and a half months. As there was no mutual understanding due to family issues, a divorce petition had been filed in the Family Court, and the matter was under trial.

On 10th January 2026, Asha was found hanging from the ceiling fan using a saree in the room of the house where she was presently residing in R.R. Nagar. The complainant expressed suspicion regarding the circumstances of her death. Accordingly, a UDR (Unnatural Death Report) case was registered at Rajarajeshwarinagar Police Station, and investigation was taken up. On 11th January 2026, the dead body was subjected to post-mortem examination by doctors at Victoria Hospital. In their report, the doctors expressed suspicion regarding the cause of death and submitted a detailed opinion. Based on this, further investigation was carried out, and on 14th January 2026, the deceased's husband and his friend were taken into custody. During interrogation, both accused confessed to their involvement in the case.

On 15th January 2026, the accused were produced before the Hon'ble Court and were remanded to 8 days of police custody. Further investigation is in progress.

This operation was successfully carried out by the team of Rajarajeshwarinagar Police Station, under the guidance of Deputy Commissioner of Police, West Division, Sri Yateesh, IPS, Assistant Commissioner of Police, Batarayanapura Sub-Division, Sri Bharat Reddy, led by Police Inspector Sri Shivakumar B.N., along with other officers and staff.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ:03/ಪಿಆರ್‌ಓ/ಸಿಓಪಿ/2026.

ಪೊಲೀಸ್ ಆಯುಕ್ತ ರವರ ಕಛೇರಿ,
ಬೆಂಗಳೂರು ನಗರ,
ದಿನಾಂಕ:21/01/2026.

# ಪತ್ರಿಕಾ ಪ್ರಕಟಣೆ

## ರಾಜರಾಜೇಶ್ವರಿನಗರ ಪೊಲೀಸರ ಕಾರ್ಯಾಚರಣೆ.
## ಹೆಂಡತಿಯ ಅನೈತಿಕ ಸಂಬಂಧ ಶಂಕಿಸಿ ಕೊಲೆ ಮಾಡಿದ್ದ ಗಂಡ ಮತ್ತು ಆತನ ಸ್ನೇಹಿತನ ಬಂಧನ.

ದಿನಾಂಕ:10/01/2026 ರಂದು ಪಿರ್ಯಾದುದಾರರಾದ ಶ್ರೀಅರುಣ್‌ಕುಮಾರ್ ಎಂಬುವವರು ಠಾಣೆಗೆ ಹಾಜರಾಗಿ ದೂರನ್ನು ಸಲ್ಲಿಸಿರುತ್ತಾರೆ. ದೂರಿನಲ್ಲಿ ತನ್ನ ತಂಗಿ ಶ್ರೀಮತಿ. ಆಶಾಎಸ್ ಕೋಂ ವಿರೂಪಾಕ್ಷ, ರವರು ಸುಮಾರು ಆರು ವರ್ಷದ ಹಿಂದೆ ತಮ್ಮ ಸ್ವಂತ ಊರಾದ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು ಸಂತೆಮಾವತೂರು ಗ್ರಾಮದ ನಿವಾಸಿಯಾದ ವಿರೂಪಾಕ್ಷ ಎಂಬುವವರನ್ನು ಪ್ರೀತಿಸಿ ಮದುವೆಯಾಗಿರುತ್ತಾರೆ. ಇವರು ಅಂದಿನಿಂದ ಬೆಂಗಳೂರಿನಲ್ಲಿಯೇ ವಾಸವಾಗಿದ್ದು, ಪ್ರಸ್ತುತ ರಾಜರಾಜೇಶ್ವರಿನಗರದಲ್ಲಿ ಕಳೆದ ಒಂದೂವರೆ ವರ್ಷದಿಂದ ವಾಸವಾಗಿರುತ್ತಾರೆ. ಮದುವೆಯಾದಾಗಿನಿಂದಲೂ ವಿರೂಪಾಕ್ಷರವರು ಆಶಾಳನ್ನು ಸರಿಯಾಗಿ ನೋಡಿಕೊಳ್ಳದೆ, ಸರಿಯಾಗಿ ಕೆಲಸಕ್ಕೂ ಹೋಗದೇ, ತನ್ನ ತಂಗಿ ಕೆಲಸ ಮಾಡಿ ಅದರಿಂದ ಬಂದ ಹಣವನ್ನು ಆತನೇ ಬಳಸಿಕೊಳ್ಳುತ್ತಿದ್ದನು. ಮುಂದುವರೆದು, ವಿರೂಪಾಕ್ಷರವರಿಗೆ ಬೇರೆಯಾವುದೋ ಅಕ್ರಮ ಸಂಬಂಧವಿರುವ ವಿಚಾರದಲ್ಲಿ ಇಬ್ಬರ ನಡುವೆ ಜಗಳವಾಗಿ ಸುಮಾರು ಒಂದೂವರೆ ತಿಂಗಳಿಂದ ಪ್ರತ್ಯೇಕವಾಗಿ ವಾಸವಾಗಿದ್ದರು.

ಇವರಿಬ್ಬರ ನಡುವೆ ಕೌಟುಂಬಿಕ ವಿಚಾರವಾಗಿ ಹೊಂದಾಣಿಕೆಯಿಲ್ಲದೇ, ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನಕ್ಕಾಗಿ ದಾವೆ ಹೂಡಿದ್ದು ವಿಚಾರಣೆಯಲ್ಲಿರುತ್ತದೆ. ದಿನಾಂಕ:10/01/2026 ರಂದು ಮೃತೆ ಆಶಾಳು ಆಕೆ ಪ್ರಸ್ತುತ ವಾಸವಿದ್ದ ಆರ್.ಆರ್‌ನಗರದ ಮನೆಯ ರೂಂನಲ್ಲಿರುವ ಸೀಲಿಂಗ್‌ಫ್ಯಾನ್‌ಗೆ ಸೀರೆಯನ್ನು ಕಟ್ಟಿಕೊಂಡು, ಕುತ್ತಿಗೆ ಬಿಗಿದುಕೊಂಡು ನೇಣುಹಾಕಿಕೊಂಡಿರುವುದು ಕಂಡುಬಂದಿರುತ್ತದೆ, ಆಕೆಯ ಸಾವಿನ ವಿಚಾರದಲ್ಲಿ ಅನುಮಾನವಿರುವುದಾಗಿ ತಿಳಿಸಿರುತ್ತಾರೆ. ಈ ಕುರಿತು ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತೆ.

ದಿನಾಂಕ:11/01/2026 ರಂದು ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರಿಂದ ಶವ ಪರೀಕ್ಷೆಯನ್ನು ಮಾಡಿಸಿದ್ದು, ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಾಧಿಕಾರಿಗಳು ತಮ್ಮ ವರದಿಯಲ್ಲಿ ಮೃತೆಯ ಸಾವಿನ ವಿಚಾರವಾಗಿ ಅನುಮಾನ ವ್ಯಕ್ತಪಡಿಸಿ, ತಮ್ಮ ಸ್ಪಷ್ಟ ವರದಿಯನ್ನು ನೀಡಿದ್ದರ ಮೇರೆಗೆ ತನಿಖೆಯನ್ನು ಮುಂದುವರೆಸಿ, ಮೃತೆಯ ಪತಿ ಹಾಗೂ ಪತಿಯ ಸ್ನೇಹಿತರನ್ನು ದಿನಾಂಕ:14/01/2026 ರಂದು ವಶಕ್ಕೆ ಪಡೆದುಕೊಳ್ಳಲಾಯಿತು. ವಶಕ್ಕೆ ಪಡೆದ ಇಬ್ಬರನ್ನು ವಿಚಾರಣೆಗೊಳಪಡಿಸಲಾಗಿ, ಈ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ತಪ್ಪೊಪ್ಪಿಕೊಂಡಿರುತ್ತಾರೆ. ದಿನಾಂಕ:15/01/2026 ರಂದು ಆರೋಪಿಗಳಿಬ್ಬರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ, 8 ದಿನಗಳ ಕಾಲ ಪೊಲೀಸ್ ಅಭಿರಕ್ಷೆಗೆ ಪಡೆದುಕೊಳ್ಳಲಾಗಿರುತ್ತದೆ. ತನಿಖೆ ಮುಂದುವರೆದಿದೆ.

ಈ ಕಾರ್ಯಾಚರಣೆಯನ್ನು ಉಪ ಪೊಲೀಸ್ ಆಯುಕ್ತರು ಪಶ್ಚಿಮ ವಿಭಾಗದ ಶ್ರೀ.ಯತೀಶ್, ಐ.ಪಿ.ಎಸ್, ಸಹಾಯಕ ಪೊಲೀಸ್ ಆಯುಕ್ತರು, ಬ್ಯಾಟರಾಯನಪುರ ಉಪ ವಿಭಾಗ ಶ್ರೀ.ಭರತ್ ರೆಡ್ಡಿ ರವರ ಮಾರ್ಗದರ್ಶನದಲ್ಲಿ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ. ಶಿವಕುಮಾರ್.ಬಿ.ಎನ್ ಹಾಗೂ ಇತರೆ ಅಧಿಕಾರಿ ಮತ್ತು ಸಿಬ್ಬಂದಿಯವರ ತಂಡ ಪ್ರಕರಣವನ್ನು ಪತ್ತೆಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ.